ಕರ್ನಾಟಕ ಸರ್ಕಾರ

ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ 57)

ನಮೂನೆ ಸಂಖ್ಯೆ 4

ಪ್ರಧಾನ ಜೆ.ಎಂ.ಎಫ್.ಸಿ. ನ್ಯಾಯಾಲಯ, ಸಿಂಧನೂರು.

ಸಿ.ಸಿ. ಸಂಖ್ಯೆಃ 547/2018 CW-7 PW- 1

| | |
|---|---|
| ಹೆಸರು | ದೊಡ್ಡಬಸವ |
| ತಂದೆಯ ಹೆಸರು | ಶಂಕರಗೌಡ |
| ವಯಸ್ಸು | 31 |
| ಉದ್ಯೋಗ | ಫೀಲ್ಡ್ ಆಫೀಸರ್, ಎಕ್ಸಿಸ್ ಬ್ಯಾಂಕ್ |
| ವಾಸ ಸ್ಥಳ | ಸಿರುಗುಪ್ಪಾ |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 17-11-2021

ಮುಖ್ಯ ವಿಚಾರಣೆಃ ಸ ಸ ಅ ಅವರಿಂದ

ನಾನು 2015 ರಿಂದ 2018 ರವರೆಗೆ ಐ.ಸಿ.ಐ.ಸಿ.ಐ. ಬ್ಯಾಂಕ್ ಸಿರುಗುಪ್ಪಾ ಶಾಖೆಯಲ್ಲಿ ಫೀಲ್ಡ್ ಆಫೀಸರ್ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣದಲ್ಲಿ ನನಗೆ ಏನೂ ಗೊತ್ತಿಲ್ಲ. ಆರೋಪಿ ಐ.ಸಿ.ಐ.ಸಿ.ಐ ಬ್ಯಾಂಕ್‌ನಲ್ಲಿ 5 ಲಕ್ಷ ಸಾಲ ತೆಗೆದುಕೊಂಡಿದ್ದ, 2018 ರಲ್ಲಿ ಸಾಲ ಮರುಪಾವತಿ ಮಾಡಿರುತ್ತಾನೆ. ಈ ಕುರಿತು ಪೋಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ, ಯಾವುದೇ ಹೇಳಿಕೆ ಪಡೆದಿಲ್ಲ.

(ಈ ಹಂತದಲ್ಲಿ ಸ ಸ ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿಲಾಯಿತು.)

ಪಾಟೀ ಸವಾಲು ಃ ಸಸಅ ಅವರಿಂದ

ದಿ: 15/04/2015 ರಂದು ನಾನು ಐ.ಸಿ.ಐ.ಸಿ.ಐ ಬ್ಯಾಂಕ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಸಿಂಧನೂರು ಗ್ರಾಮದ ಗಾದೆಪ್ಪ ತಂ. ಕಾಡಪ್ಪ ಆತನ ಹೆಂಡತಿ ಗುಂಡಮ್ಮ ನಮ್ಮ ಬ್ಯಾಂಕ್‌ಗೆ ಬಂದು

ಬೆಳೆ ಸಾಲದ ಅವಶ್ಯಕತೆ ಇದೆ ಹಣ ಮಂಜೂರು ಮಾಡು ಅಂತಾ ಕೇಳಿಕೊಂಡರು ಎಂದರೆ ಸರಿ. ನಾನು ಅರ್ಜಿದಾರ ಗಾದೆಪ್ಪ ಅವರ ಜಮಿನು ಸರ್ವೆ ನಂ. 32 ಬಿ ಕ್ಷೇತ್ರ 6 ಎಕರೆ 23 ಗುಂಟೆ ಪಹಣಿ ಪತ್ರಿಕೆ ಹಾಗೂ ಅರ್ಜಿದಾರನ ಮತ್ತು ಆತನ ಹೆಂಡತಿಯ ಭಾವಚಿತ್ರ ಮತ್ತು ಸಹಿ ಪಡೆದುಕೊಂಡು ಬೆಳೆ ಸಾಲದ ಮಂಜೂರಾತಿಗೆ ಕಳುಹಿಸಿರುತ್ತೇನೆ ಎಂದರೆ ಸರಿ. ನಂತರ ದಿ: 25/04/2016 ರಂದು ಗಾದೆಪ್ಪ ಈತನಿಗೆ ರೂ. 5,50,000.00 ಸಾಲ ಮಂಜೂರಾಗಿರುತ್ತದೆ ಎಂದರೆ ಸರಿ. 1984 ರಿಂದ 2015 16 ರವರೆಗೆ ಪಹಣಿ ಪತ್ರಿಕೆಗಳು, ಬೆಳೆ ದೃಢೀಕರಣ ಪತ್ರ, ಬೇಬಾಕಿ ಪ್ರಮಾಣ ಪತ್ರ, ಜಮೀನಿನ ಚೆಕ್‌ಬಂದಿ, ಇ.ಸಿ. ವಂಶಾವಳಿ ಪತ್ರ ತರಲು ತಿಳಿಸಿರುತ್ತೇನೆ ಎಂದರೆ ಸರಿ. ದಿ: 21/05/2016 ರಂದು ಅರ್ಜಿದಾರರು ತಮ್ಮ ಬೆಳೆ ವಿಮೆಯ ಸಾಲ ಪಡೆಯುವ ಕುರಿತು ಸಲ್ಲಿಸಿದ ದಾಖಲೆಗಳನ್ನು ನಮ್ಮ ಬ್ಯಾಂಕಿನ ಲೀಗಲ್ ಅಡ್ವೈಸರ್ ಆದ ಚಾ.ಸಾ. 4 ಇವರಿಗೆ ಕಳುಹಿಸಿರುತ್ತೇನೆ ಎಂದರೆ ಸರಿ. ನಂತರ ಚಾ.ಸಾ. 4 ರವರು ಪರಿಶೀಲಿಸಿ ತಮ್ಮ ವರದಿ ಸಲ್ಲಿಸಿದರು ಎಂದರೆ ಸರಿ. ನಂತರ ನಮ್ಮ ಬ್ಯಾಂಕಿಗೆ ಅಡಮಾನ ಮಾಡಿ ನೊಂದಣಿ ಮಾಡಬೇಕು ಅಂತಾ ತಿಳಿಸಿರುತ್ತೇನೆ ಎಂದರೆ ಸರಿ. ದಿ: 24/05/2016 ರಂದು ಸಿಂಧನೂರಿನ ಉಪನೊಂದಣಾಧಿಕಾರಿ ಕಛೇರಿಯಲ್ಲಿ ಅಡಮಾನ ಮಾಡಿ ದಾಖಲೆ ಹಾಜುರಪಡಿಸಿದರು ಎಂದರೆ ಸರಿ. ನಂತರ ದಿ: 30/05/2016 ರಂದು ಹಣ ಮಂಜೂರು ಆಯಿತು ಎಂದರೆ ಸರಿ. ನಂತರ ದಿ: 31/05/2016 ರಂದು ಅರ್ಜಿದಾರರು ಬ್ಯಾಂಕಿಗೆ ಬಂದು ರೂ. 3,50,000.00 ಹಣ ತೆಗೆದುಕೊಂಡು ಹೋದರು ಎಂದರೆ ಸರಿ. ನಂತರ ದಿ: 13/06/2016 ರಂದು ರೂ. 1,50,000.00 ಹಣ ತೆಗೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ಉಳಿದ ಹಣ ಖಾತೆಯಲ್ಲಿ ಇರುತ್ತದೆ ಎಂದರೆ ಸರಿ. ಸಿಂಧನೂರಿನ ಸೈಯದ್ ತಾಜುದ್ದೀನ್ ತಂ. ಸೈಯದ್ ಮಹ್ಮದ್ ಹಾಗೂ ರಾಮಯ್ಯ ತಂ. ವೀರಯ್ಯ ಮತ್ತು ಆರೋಪಿ ನಂ. 1 ಭೀರಪ್ಪ ಇವರೆಲ್ಲರೂ ಸೇರಿ ಗಾದೆಪ್ಪನಿಗೆ ಮತ್ತು ಬ್ಯಾಂಕಿಗೆ ಮೋಸ ಮಾಡುವ ಸಲುವಾಗಿ 1 ನೇ ಆರೋಪಿ ಭೀರಪ್ಪ ತಾನೇ ಗಾದೆಪ್ಪ ಅಂತಾ ಹೇಳಿ ಚುನಾವಣೆ ಗುರುತಿನ ಚೀಟಿ ಸೃಷ್ಟಿಸಿ ಜನ್ಮ ದಿನಾಂಕ ಸೃಷ್ಟಿಸಿ ನಮ್ಮ ಬ್ಯಾಂಕಿಗೆ ಬೆಳೆ ಸಾಲ ಪಡೆಯುವ ಕುರಿತು ದಾಖಲಾತಿಗಳನ್ನು ನೀಡಿ ಅಡಮಾನ ಮಾಡಿ

ಸಿ.ಸಿ. ಸಂಖ್ಯೆಃ 547/2018
CW-7 PW- 1

ಗಾದೆಪ್ಪನ ಹೆಸರಿನಲ್ಲಿ ಸಾಲ ಪಡೆದುಕೊಂಡು ಮೋಸ ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಈ ವಿಷಯ ನನಗೆ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ. 1 ಎಂದು, ಹೇಳಿಕೆಯ ಭಾಗವನ್ನು ನಿ.ಪಿ. 1(ಎ) ಎಂದು ಗುರುತಿಸಲಾಯಿತು. ನಿ.ಪಿ. 1(ಎ) ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿಯೊಂದಿಗೆ ಶಾಮೀಲಾಗಿ ಯಾವುದೇ ಮಾಹಿತಿ ಇಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮೂಲ ದಾಖಲಾತಿಗಳು ಇರದೇ ಇರುವುದರಿಂದ ಸ.ಸ.ಅ. ರವರು ತನಿಖಾಧಿಕಾರಿಗೆ ಮೂಲ ದಾಖಲಾತಿಗಳನ್ನು ಹಾಜರುಪಡಿಸುವಂತೆ ನೋಟೀಸ್ ನೀಡಿ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುತ್ತಾರೆ ಆದ್ದರಿಂದ ಕಾಲಾವಕಾಶ ನೀಡಲಾಯಿತು.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ.)

**ಓ ಹೇ ಕೇ ಸರಿ ಇದೆ,**

ಪ್ರಧಾನ ಸಿವಿಲ್ ನ್ಯಾಯಾಧೀಶರು. ಸಿಂಧನೂರು.